**ಓ.ಎಸ್. ನಂಃ 140/2022**

**ಪಿ.ಡಬ್ಲ್ಯೂಃ 1**

**ದಿನಾಂಕ 14.10.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ.ಪಿ.ಡಿ. ವಕೀಲರಿಂದಃ</u>**

13. ನಿಪಿ.16 ರ ಪ್ರಕರಣದಲ್ಲಿ ನಾನು ವಕೀಲರ ಮೂಲಕ ಹಾಜರಾಗಿ ನನ್ನ ತಕರಾರನ್ನು ಸಲ್ಲಿಸಿದ್ದೆ ಎಂದರೆ ಸರಿ. ಈ ದಾವೆಯಲ್ಲಿ ತೀರ್ಪು ಆಗುವವರೆಗೂ ನಿಪಿ.16 ರ ಪ್ರಕರಣವನ್ನು ಇತ್ಯರ್ಥ ಮಾಡಬಾರದು ಎಂದು ನಾನು ನನ್ನ ತಕರಾರಿನಲ್ಲಿ ಹೇಳಿದ್ದೆ ಎಂದರೆ ಸರಿಯಲ್ಲ. ಈ ದಾವೆ ಇತ್ಯರ್ಥ ಆಗುವವರೆಗೂ ನಿಪಿ.16 ರ ಪ್ರಕರಣವನ್ನು ಪರಿಗಣಿಸಲು ಬರುವುದಿಲ್ಲ ಎಂದು ಹೇಳಿ ನಿಪಿ.16 ರ ಪ್ರಕರಣವು ವಜಾಗೊಂಡಿರುತ್ತದೆ ಎಂದರೆ ಸರಿಯಲ್ಲ.

14. ಪಿ.ಡಬ್ಲೂ-2 ರವರಾದ ರವಿ ಬಿನ್ ಸುಬ್ಬೇಗೌಡ ನನ್ನ ಬಾಮೈದ. ಪಿ.ಡಬ್ಲೂ-2 ರವರ ಜಮೀನು ದಾವಾ ಆಸ್ತಿಯ ಯಾವ ದಿಕ್ಕಿನಲ್ಲಿಯು ಸಹ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಚೆಕ್ಕುಬಂಧಿಯಲ್ಲಿ ಪಿ.ಡಬ್ಲೂ-2 ರವರ ಜಮೀನು ದಾವಾ ಆಸ್ತಿಯ ಪಕ್ಕದಲ್ಲಿರುವ ಬಗ್ಗೆ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ತೋರಿಸಿರುವ ದಾವಾ ಆಸ್ತಿಯ ಚೆಕ್ಕುಬಂಧಿಗಳ ಪ್ರಕಾರ ದಾವಾ ಆಸ್ತಿಯ ಅಕ್ಕ-ಪಕ್ಕದಲ್ಲಿರುವ ಜಮೀನಿನ ಮಾಲೀಕರನ್ನು ನಾನು ಸಾಕ್ಷಿ ವಿಚಾರಣೆ ಮಾಡಿಸುವ ಬದಲು ದಾವಾ ಆಸ್ತಿಯ ಅಕ್ಕ-ಪಕ್ಕದಲ್ಲಿ ಯಾವುದೇ ಜಮೀನು ಇರದ ನನ್ನ ಬಾಮೈದನಾದ ಪಿ.ಡಬ್ಲೂ-2 ರವರನ್ನು ಉದ್ದೇಶಪೂರಕವಾಗಿ ನಾನು ಈ ದಾವೆಯಲ್ಲಿ ಸಾಕ್ಷಿದಾರನಾಗಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

15. ದಾವಾ ಆಸ್ತಿಯ ದಕ್ಷಿಣ ದಿಕ್ಕಿಗೆ ನನ್ನ ವಿರುದ್ಧ ಕೆ ಆರ್ ನಗರ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿರುವ ತಿಮ್ಮೇಗೌಡರ ಜಮೀನು ಇದೆ ಎಂದರೆ

ಸರಿಯಲ್ಲ. ನಾನು ದಾವಾ ಆಸ್ತಿಯ ಸುಳ್ಳು ಚೆಕ್ಕುಬಂಧಿಯನ್ನು ತೋರಿಸಿ ಈ ಸುಳ್ಳು ದಾವೆಯನ್ನು ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**